# ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಲಿಮಿಟೆಡ್
# HUBBALLI-DHARWAD SMART CITY LIMITED

सत्यमेव जयते

स्वच्छ भारत
एक कदम स्वच्छता की ओर

Special Purpose Vehicle for Implimentation of Smart City Project
(Registered Company No. CIN : U74999KA2017 PLC101265)


ಸಂಖ್ಯೆ/ಎಚ್‌ಡಿಎಸ್‌ಸಿಎಲ್/ಪತ್ರಿಕಾ ಮಾಹಿತಿ/**2017-18** ದಿನಾಂಕ : **15-11-2017**

## <u>ಪತ್ರಿಕಾ ಮಾಹಿತಿ</u>

**<u>ವಿಷಯ</u> :** ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **15-11-2017** ಬುಧವಾರ ರಂದು ನೆಹರು ಮೈದಾನ ಹುಬ್ಬಳ್ಳಿಯಲ್ಲಿ ನೆಹರು ಮೈದಾನ ಅಭಿವೃದ್ದಿಯ ಹಾಗೂ ನವೀಕರಣ ಯೋಜನೆಯ ಕುರಿತು ಕ್ರೀಡಾಪಟಗಳೊಂದಿಗೆ ಸಮಾಲೋಚನೆ ಸಭೆ ಸಂಘಟಿಸಿದ ಕುರಿತು ವರದಿ.

* * * * *

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ ಸಿಟಿ ಯೋಜನೆಯಲ್ಲಿ ದಿ: **15-11-2017** ಬುಧವಾರ ರಂದು ನೆಹರು ಮೈದಾನ ಹುಬ್ಬಳ್ಳಿಯಲ್ಲಿ ನೆಹರು ಮೈದಾನ ಅಭಿವೃದ್ದಿಯ ಹಾಗೂ ನವೀಕರಣ ಯೋಜನೆಯ ಕುರಿತು ಕ್ರೀಡಾಪಟಗಳೊಂದಿಗೆ ಸಮಾಲೋಚನೆ ಸಭೆ ಸಂಘಟಿಸಲಾಯಿತು. ಸದರಿ ಸಭೆಯಲ್ಲಿ ಪಾಲಿಕೆಯ, ಪಾಲಿಕೆಯ ಆಯುಕ್ತರಾದ ಮೇಜರ್. ಸಿದ್ದಲಿಂಗಯ್ಯಾ ಎಸ್. ಹಿರೇಮಠ, ಪಾಲಿಕೆಯ ವಾರ್ಡ ಸದಸ್ಯರಾದ ಶ್ರೀಮತಿ.ಸ್ಮಿತಾ.ಅಶೋಕ ಜಾಧವ್, ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ಶ್ರೀ.ಅಜೀಜ ದೇಸಾಯಿ, ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್, ಪಿಡಬ್ಲ್ಯೂಸಿ ಸಂಸ್ಥೆಯ ಪರಿಣಿತ ತಜ್ಞರು, ಮತ್ತು ನೆಹರು ಮೈದಾನದಲ್ಲಿ ದಿನನಿತ್ಯ ಆಟ ಆಡುವ ಕ್ರೀಡಾಪಟಗಳು ಬಾಗವಹಿಸಿದ್ದರು.

ಪ್ರಾರಂಭದಲ್ಲಿ ಸ್ಮಾರ್ಟಸಿಟಿ ಯೋಜನೆ ಹಾಗೂ ನೆಹರು ಮೈದಾನ ಅಭಿವೃದ್ದಿ ಹಾಗೂ ನವೀಕರಣ ಕುರಿತು ಪ್ರಾಸ್ತಾವಿಕವಾಗಿ ಪಾಲಿಕೆಯ ಆಯುಕ್ತರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್, ಹುಬ್ಬಳ್ಳಿ ಮೇಜರ್. ಸಿದ್ದಲಿಂಗಯ್ಯಾ ಎಸ್. ಹಿರೇಮಠ ಇವರು ಮಾತನಾಡಿ ನೆಹರು ಮೈದಾನ ಅಭಿವೃದ್ದಿ ಹಾಗೂ ನವೀಕರಣ ನವೀಕರಣ ಕಟ್ಟಡ, ಬಾಸ್ಕೆಟ್ ಬಾಲ್ ಕೊರ್ಟ, ರೂಪ್-ಟಾಪ್ ಸೂಲಾರ, ಎಲ್ಲ ಕ್ರಿಡೆಗಳಿಗೆ ಅನಕೂಲವಾಗುವಂತೆ ಮೂಲ ಭೂತ ವ್ಯವಸ್ಥೆಯೊಂದಿಗೆ ಮೈದಾನ ನಿರ್ಮಾಣ ಕಂಪೂಂಡ ಗೋಡೆ ಎತ್ತರಿಸುವದು ಕುರಿತು ವಿವರವಾಗಿ ತಿಳಿಸಿದರು. ಪಿಡಬ್ಲ್ಯೂಸಿ ಸಂಸ್ಥೆಯ ಪರಿಣಿತ ತಜ್ಞರು ಮೈದಾನದ ಅಭಿವೃದ್ಧಿಯಲ್ಲಿ ಅಳವಡಿಸಿದ ಅಂಶಗಳ ಕುರಿತು ವಿವರಿಸಿದರು. ಪಾಲಿಕೆಯ ಶ್ರೀಮತಿ.ಸ್ಮಿತಾ.ಅಶೋಕ.ಜಾಧವ್ ಇವರು ಮಾತನಾಡಿ ಸ್ಮಾರ್ಟಸಿಟಿ ಯೋಜನೆಯಲ್ಲಿ ಮೈದಾನವನ್ನು ಅಭಿವೃದ್ಧಿಪಡಿಸೋಣ ತಮ್ಮೆಲ್ಲರ ಸಹಕಾರವಿರಲಿ ಎಂದು ಕೋರಿದರು.

ಕ್ರೀಡಾಪುಟಗಳು ಮಾತನಾಡಿ ಮೈದಾನವು ಸಾರ್ವಜನಿಕ ಸಮಾರಂಭಕ್ಕೆ ನೀಡಬಾರದು. ಮೈದಾನ ಅಭಿವೃದ್ಧಿಯಲ್ಲಿ ಸ್ಥಳಿಯ ಕ್ರಿಡಾಪಟಗಳನ್ನು ಒಳಗೊಂಡು ಸಮಿತಿಯನ್ನು ರಚಿಸಬೇಕು, ಮೈದಾನದಲ್ಲಿ ಸ್ವಚ್ಛತೆ ಮತ್ತು ಕಸವಿಲೆವಾರಿಯಾಗಬೇಕು, ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆಯಾಗಬೇಕು, ಈಗ ಇರುವ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಬೇಕು, ಎಲ್ಲ ಆಟಗಳ ವ್ಯವಸ್ಥೆಗೆ ಅವಕಾಶ ನೀಡಬೇಕು, ಸಿಂಥೇಟಿಕ್ ಟರ್ಫ ನಿರ್ಮಾಣ ಬೇಡಾ, ಅಭಿವೃದ್ಧಿಯ ಸಮಯದಲ್ಲಿ ದೈನಂದಿನ ಉಪಯೋಗದಲ್ಲಿ ಅಡಚಣೆಯಾಗದಂತೆ ಕೆಲಸ ನಿರ್ವಹಿಸಬೇಕು, ಚಿಕ್ಕ ಮಕ್ಕಳ ಮತ್ತು ಮಹಿಳೆಯರಿಗರ ಭದ್ರತೆಯ ದೃಷ್ಟಿಯಿಂದ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಬೇಕು ಮೈದಾನದಲ್ಲಿ ವಿಶೇಷ ಕ್ಯಾಮರಾ ಅಳವಡಿಸಬೇಕೆಂದು ಸಲಹೆಗಳನ್ನು ಸ್ವೀಕರಿಸಲಾಯಿತು.

ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಸಂಸ್ಥೆಯ ವಿಶೇಷ ಅಧಿಕಾರಿಗಳಾದ ಶ್ರೀ ಎಸ್. ಎಚ್. ನರೇಗಲ್, ಇವರು ಮಾತನಾಡಿ ತಾವು ನೀಡಿರುವ ಸಲಹೆಗಳನ್ನು ದಾಖಲಿಸಲಾಗಿದೆ. ಪ್ರಸ್ತುತ ತಯಾರಿಸಿರುವ ಸಾಧ್ಯತಾ ವರದಿಯಲ್ಲಿ (ಡಿ.ಪಿ.ಆರ್) ದಲ್ಲಿ ಅಳವಡಿಸಲಾಗುವುದು. ಸ್ಮಾರ್ಟಸಿಟಿ ಯೋಜನೆಯಲ್ಲಿ ತೆಗೆದುಕೊಳ್ಳುವ ಎಲ್ಲ ಪೂರಕ ಮತ್ತು ಅನುಷ್ಠಾನಗೊಳಿಸುವ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಪೂರೈಸುವದಾಗಿ ತಿಳಿಸಿದರು. ಈ ವರದಿಯೊಂದಿಗೆ ಸಮಾಲೋಚನಾ ಸಭೆಯ ಫೋಟೋಗಳನ್ನು ಲಗತ್ತಿಸಿ ಕಳಿಸಲಾಗಿದೆ.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿ
ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
ಹುಬ್ಬಳ್ಳಿ


**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ-ಮೇಲ್ :** sohdsmartcity@gmail.com


**<u>ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :</u>**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ ಕಾಲೇಜ ಆವರಣ ವಿದ್ಯಾನಗರ, ಹುಬ್ಬಳ್ಳಿ